ಯಾವ ಗ್ರಾಮದಲ್ಲಿರುವಂಥ ಆಸ್ಪತ್ರೆಗೆ ನಾವು ರಿಕ್ರೂಟ್ ಮಾಡುತ್ತೇವೆ ಆ ಸ್ಥಳದಲ್ಲಿ ಡಾಕ್ಟರ್ ಇರಬೇಕು ಎನ್ನುವುದರ ಬಗ್ಗೆ ಚರ್ಚೆ ಆಯಿತು. ಇವೊತ್ತಿನವರೆಗೂ ಕ್ರಮ ತೆಗೆದುಕೊಂಡಿಲ್ಲ. ಡಾಕ್ಟರ್‌ನ್ನು ಆ ಗ್ರಾಮಕ್ಕೆ ಇರಬೇಕು ಎಂದು ನೇಮಕದ ಆರ್ಡರ್ ಇಶ್ಯೂ ಮಾಡಿದರೆ ಕಡೇ ಪಕ್ಷ ಮೂರು ವರ್ಷಗಳ ಮಟ್ಟಿಗಾದರೂ ಆತ ಅಲ್ಲಿಯೇ ಇರುತ್ತಾನೆ. ಆದರೆ ಇನ್‌ಫ್ಲುಯನ್ಸ್ ತೆಗೆದುಕೊಂಡು ಬಂದು ರಿಕ್ರೂಟ್‌ಮೆಂಟ್ ಆದಂಥ ವ್ಯಕ್ತಿಗಳು ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ಬರುವಂಥ ವ್ಯವಸ್ಥೆ ಆಗುತ್ತದೆ ಎಂದು ಚರ್ಚೆ ಆಗಿತ್ತು. ಇವೊತ್ತಿನವರೆಗೂ ಅದರ ಬಗ್ಗೆ ಕ್ರಮ ಕೈಗೊಂಡಿಲ್ಲ. ಮತ್ತೊಂದು ಕಳೆದ ಬಾರಿ ನಿರ್ಣಯ ತೆಗೆದುಕೊಂಡಿದ್ದು ಏನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಮೂರು ಪಿ.ಹೆಚ್.ಒ.ಗಳನ್ನು ಮೆಡಿಕಲ್ ಕಾಲೇಜ್‌ಗಳು ಅಡಾಪ್ಟ್ ಮಾಡಿಕೊಳ್ಳಬೇಕು ಎಂದು ಕಳೆದ ಬಾರಿ ನಿರ್ಣಯವಾಗಿತ್ತು. ಆದರೆ ಇವೊತ್ತಿನವರೆಗೂ ಕೂಡ ಕ್ರಮಕೈಗೊಂಡಿಲ್ಲ.

Mr. SPEAKER :- That is entirely a different question. ನೀವು ಕೇಳುತ್ತಿರುವ ಪ್ರಶ್ನೆ ಈ ಪ್ರಶ್ನೆಗೆ ಪೂರಕವಾಗಿಲ್ಲ. ಇಲ್ಲಿ ಡಾಕ್ಟರ್‌ಗಳು ಇಲ್ಲ ಎನ್ನುವುದು ಮುಖ್ಯ ಪ್ರಶ್ನೆಯಾಗಿದೆ.

ಶ್ರೀ ಎಂ.ಡಿ. ಲಕ್ಷ್ಮಿನಾರಾಯಣ್ : ಮಾನ್ಯ ಅಧ್ಯಕ್ಷರೆ, ವರ್ಗಾವಣೆ ನೀತಿಯಲ್ಲಿ ಆಸ್ಪತ್ರೆಯಲ್ಲಿ ಕನಿಷ್ಟ ಎರಡು ವರ್ಷಗಳ ಕಾಲ ಸೇವೆಯನ್ನು ಗ್ರಾಮೀಣ ಪ್ರದೇಶದ ಆಸ್ಪತ್ರೆಗಳಲ್ಲಿಯೇ ಸಲ್ಲಿಸಬೇಕು ಎಂದು ತಾವು ಮಾಡುತ್ತೀರಾ. ಈಗ ಮೂರು ಮೂರು ತಿಂಗಳಿಗೆ ಆರು ತಿಂಗಳಿಗೆ ವರ್ಗಾವಣೆಯಾಗುತ್ತದೆ. ಆದುದರಿಂದ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ ಎರಡರಿಂದ ಮೂರು ವರ್ಷಗಳವರೆಗೆ ವೈದ್ಯರು ಸೇವೆ ಸಲ್ಲಿಸಬೇಕು ಎಂದು ಮಾಡಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸದಸ್ಯರ ಸಲಹೆ ಸೂಕ್ತವಾಗಿದೆ.

ಶ್ರೀ ಎನ್. ಚಿಲುವರಾಯ ಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇದೆ.

ಅಧ್ಯಕ್ಷರು : ನಾನು ಆಗಲೇ ಕರೆದೆ. ನೀವು ಇರಲಿಲ್ಲ. ಮತ್ತೆ ಒಂದು ರೌಂಡ್ ಬರಬೇಕು. ಈಗ ಮುಂದಿನ ಪ್ರಶ್ನೆ ಸಂಖ್ಯೆ 75. ಮಹಾಂತೇಶ್ ಕೌಜಲಗಿಯವರದ್ದು.

ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯವನ್ನು ಪ್ರಾರಂಭಿಸುವುದು

20 (75) ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ (ಬೈಲಹೊಂಗಲ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆ ಸೌದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಮಲಪ್ರಭಾ ಮುಳುಗಡೆ ಪ್ರದೇಶದ ಜನರ ಅನುಕೂಲತೆಗಾಗಿ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಪೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) ಸರ್ಕಾರದ ನೀತಿಯಂತೆ ಸ್ವತಂತ್ರ ಪದವಿ ಪೂರ್ವ ಕಾಲೇಜನ್ನು ತೆರೆಯಲು ಅವಕಾಶವಿಲ್ಲದಿರುವುದರಿಂದ ಹಾಗೂ ಹೊಸ ಕಾಲೇಜುಗಳ ಪ್ರಸ್ತಾವನೆಗೆ ಆಯವ್ಯಯದಲ್ಲಿ ಅವಕಾಶವಿಲ್ಲದಿರುವುದರಿಂದ ಈ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜನ್ನು ತೆರೆಯಲು ಸಾಧ್ಯವಿರುವುದಿಲ್ಲ.

ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ : ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರವಾದ ಸವದತ್ತಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಒಂದು ಸ್ವತಂತ್ರ ಪದಪೂ ಪೂರ್ವ ಕಾಲೇಜ್ ಅನ್ನು ಪ್ರಾರಂಭ ಮಾಡಬೇಕು ಎನ್ನುವ ನನ್ನ ಪ್ರಶ್ನೆಗೆ ಸರ್ಕಾರದವರು ಸಾಧ್ಯವಿರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಭಾಗದಲ್ಲಿ ಯಾವುದೇ ರೀತಿಯಾದ ಒಂದು ಸ್ವತಂತ್ರ ಪದವಿ ಪೂರ್ವ ಕಾಲೇಜು ಇಲ್ಲದೇ ಇರುವುದರಿಂದ ಆ ಭಾಗದ ವಿದ್ಯಾರ್ಥಿಗಳಿಗೆ ಆಗುತ್ತಿರುವಂಥ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳುತ್ತೇನೆ. ಏಕೆಂದರ ಈ ಪ್ರದೇಶ ಮಲಪ್ರಭಾ ಯೋಜನೆಯಡಿಯಲ್ಲಿ ಮುಳುಗಡೆ ಪ್ರದೇಶವಾಗಿರುವುದರಿಂದ ಇದೊಂದು ವಿಶೇಷ ಪ್ರಕರಣ ಎಂದು ಪರಿಗಣನೆಗೆ ಮಾಡುತ್ತಾ ತೆಗೆದುಕೊಂಡು ಒಂದು ಹೊಸ ಸ್ವತಂತ್ರ ಪದವಿ ಪೂರ್ವ ಕಾಲೇಜ್ ಅನ್ನು ಸರ್ಕಾರದವರು ಮಂಜೂರು ಮಾಡುತ್ತಾ ಎಂಬುದರ ಬಗ್ಗೆ ಹೇಳಬೇಕು.

ಪ್ರೊ.ಬಿ.ಕೆ ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೆ, ಕಾಲೇಜ್‌ಗೆ ಗ್ರಾ ೃಂಟ್‌ಬೇಕು, ಅದನ್ನು ಹೇಗಾದರೂ ಹೊಂದಿಸಿದರೂ ಕೂಡ ಶಿಕ್ಷಕರನ್ನು ತಕ್ಷಣ ಅಲ್ಲಿಗೆ ಹಾಕುವುದಕ್ಕೆ ಕಷ್ಟವಾಗುತ್ತದೆಯಾದ ಕಾರಣ ಮುಂದಿನ ವರ್ಷದಿಂದ ಈ ವಿಶೇಷ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾಡೋಣ.

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ : ಈ ವರ್ಷದಿಂದಲೇ ಒಂದು ಪದವಿ ಪೂರ್ವ ಕಾಲೇಜ್ ಅನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಡಿ.

ಪ್ರೊ ಬಿ.ಕೆ. ಚಂದ್ರಶೇಖರ್ : ದಯಮಾಡಿ ನನ್ನ ಮಾತು ಕೇಳಿ. ಕಾಲೇಜ್ ಪ್ರಾರಂಭ ಮಾಡಿ ಶಿಕ್ಷಕರನ್ನು ಅಲ್ಲಿಗೆ ಹಾಕದೇ ಇದ್ದರೆ ಏನೇನೂ ಉಪಯೋಗವಾಗುವುದಿಲ್ಲ. ಸುಮ್ಮನೆ ನಮ್ಮ ಸಮಾಧಾನಕ್ಕೆ ಮಾಡಿದ ಹಾಗಾಗುತ್ತದಷ್ಟೆ.

ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬೇರೆ ಕಡೆ ಎಲ್ಲಾದರೂ ಸರ್ಕಾರಿ ಪದವಿ ಪೂರ್ವ ಕಾಲೇಜ್ ಅನ್ನು ಸರ್ಕಾರ ಮುಚ್ಚಿದರೆ ಅಥವಾ ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಾರಣಕ್ಕೆ ಮುಚ್ಚಿದರೆ ಇದನ್ನು ಪ್ರಥಮ ಆದ್ಯತೆಯ ಮೇಲೆ ಪರಿಗಣನೆಗೆ ತೆಗೆದುಕೊಳ್ಳುತ್ತಾರೆಯೇ ಎಂದು ತಮ್ಮ ಮೂಲಕ ಸಚಿವರಲ್ಲಿ ಕೇಳುತ್ತಿದ್ದೇನೆ.

ಪ್ರೊ ಬಿ.ಕೆ. ಚಂದ್ರಶೇಖರ್ : ಎಲ್ಲಾ ಕಡೆ ರ್‍ಯಾಶನಲೈಸ್ ಮಾಡುತ್ತಿರುವ ಹಾಗೆ ಆ ಪ್ರದೇಶದಲ್ಲಿ ಶಿಫ್ಟ್ ಮಾಡುವುದು ಅವಶ್ಯವಿದ್ದರೆ ಆದ್ಯತೆ ಕೊಡೋಣ. ಈಗಾಗಲೇ ತಮ್ಮ ಕಡೆಗೆ ಒಂದು ಕಾಲೇಜ್ ಅನ್ನು ಹೊಸದಾಗಿ ಕೊಟ್ಟಿದೆಯೇನೋ ಎಂದು ನನಗನ್ನಿಸುತ್ತಿದೆ. ತಾವು ನಗುತ್ತಾ ಇರುವುದನ್ನು ನೋಡಿದರೆ ಸಂತೋಷದಿಂದ ಇರುವುದು ಗೊತ್ತಾಗುತ್ತದೆ. ಸ್ವಲ್ಪ ಆದರೆ ಇದನ್ನು ಮಾಡೋಣ. ಇಲ್ಲದಿದ್ದರೆ ಮುಂದಿನ ವರ್ಷ ಖಂಡಿತ ಮಾಡೋಣ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಕಷ್ಣಪ್ಪನವರದ್ದು ಇದೆ. ಕೃಷ್ಣಪ್ಪನವರೇ, ಅದಕ್ಕೆ ಉತ್ತರ ಬಂದಿಲ್ಲದಿರುವುದರಿಂದ ನಿಮ್ಮ ಪ್ರಶ್ನೆಯನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಕೃಷ್ಣಪ್ಪ : ನಮ್ಮದು ಬರೋದೇ ಒಂದು ಪ್ರಶ್ನೆ. ಮಂತ್ರಿಗಳು ಇನ್ನು ಅದರ ಬಗ್ಗೆ ಸ್ಪಡಿ ಮಾಡಿಲ್ಲವೆ?

ಅಧ್ಯಕ್ಷರು : ಕೃಷ್ಣಪ್ಪನವರೇ, ನಾವು ಇನ್ನೂ 25 ದಿನ ಸದನವನ್ನು ನಡೆಸುತ್ತೇವೆ. ಮುಂದಿನ ವಾರ ನಿಮ್ಮ ಪ್ರಶ್ನೆಯನ್ನು ಖಂಡಿತ ತೆಗೆದುಕೊಳ್ಳುತ್ತೇವೆ. ಈಗ ಮುಂದಿನ ಪ್ರಶ್ನೆ ಮಾನ್ಯ ಗೋಪಾಲ್ ಪೂಜಾರಿಯವರದ್ದು.

ಕುಂದಾಪುರ ತಾಲ್ಲೂಕು ವಂಡ್ಸೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯಾಧಿಕಾರಿ ಹುದ್ದೆ ಭರ್ತಿ ಮಾಡುವ ಬಗ್ಗೆ

22 (64) ಶ್ರೀ ಗೋಪಾಲ ಪೂಜಾರಿ (ಬೈಂದೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ವಂಡ್ಸೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದೆ ಗರ್ಭಿಣಿಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಹುದ್ದೆಯನ್ನು ಯಾವಾಗ ತುಂಬಲಾಗುವುದ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಒಂದು ಮಹಿಳಾ ವೈದ್ಯಾಧಿಕಾರಿ ಹುದ್ದೆ ಸೃಜಿಸುವ ಪ್ರಸ್ತಾವನೆಯನ್ನು ಅಧಿಕಾರಯುಕ್ತ ಸಮಿತಿ ಮುಂದೆ ದಿನಾಂಕ 19-6-2002 ರಂದು ಇಡಲಾಗಿತ್ತು. ಅಧಿಕಾರಯುಕ್ತ ಸಮಿತಿಯು ಪ್ರಸ್ತಾವನೆಯನ್ನು ಅನುಮೋದಿಸಿದೆ. ಇದಕ್ಕೆ ಅನುಗುಣವಾಗಿ ಸರ್ಕಾರ ಆದೇಶ ಹೊರಡಿಸಿದ ನಂತರ ಹುದ್ದೆಯನ್ನು ತುಂಬಲಾಗುವುದು.

ಶ್ರೀ ಕೆ. ಗೋಪಾಲ್ ಪೂಜಾರಿ : ಮಾನ್ಯ ಅಧ್ಯಕ್ಷರೆ, ಮಹಿಳಾ ವೈದ್ಯಾಧಿಕಾರಿ ಹುದ್ದೆಯ ನೇಮಕಕ್ಕೆ ಸಂಬಂಧಪಟ್ಟಂತೆ ಆದೇಶವನ್ನು ಸರ್ಕಾರ ಎಂದು ಹೊರಡಿಸುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, ಎಂಪೌವರ್ ಕಮಿಟಿಯವರು ಕ್ಲಿಯರ್ ಮಾಡಿದ್ದಾರೆ. ಸರ್ಕಾರ ಸಾಧ್ಯವಾದಷ್ಟು ಬೇಗ ಆರ್ಡ್ರ್ ಹೊರಡಿಸುತ್ತದೆ.

ಶ್ರೀ ಕೆ. ಗೋಪಾಲ್ ಪೂಜಾರಿ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಆರೋಗ್ಯ ಘಟಕದಲ್ಲಿ ವೈದ್ಯಾಧಿಕಾರಿಗಳ ಹುದ್ದೆ ಬಹಳಷ್ಟು ಖಾಲಿ ಇದೆ, ಎ.ಎನ್.ಎಮ್. ಪೋಸ್ಟ್, ಗ್ರೂಪ್ ಡಿ ನೌಕರರ ಹುದ್ದೆ ಖಾಲಿ ಇದೆ, ಇವುಗಳನ್ನು ಯಾವಾಗ ಭರ್ತಿ ಮಾಡುತ್ತೀರಿ?